

**ಕರ್ನಾಟಕದ ಭರವಸೆಯ ಆಲ್‌ರೌಂಡರ್ ಆಗಿದ್ದ ವಿಜಯ್ ಭಾರದ್ವಾಜ್ ಅಂತರರಾಷ್ಟ್ರೀಯ ಕ್ರಿಕೆಟ್‌ನ ರುಚಿಯನ್ನೂ ಕಂಡವರು. ಹದಿಮೂರು ವರ್ಷಗಳ ಹಿಂದೆ ಕ್ರಿಕೆಟ್‌ನಿಂದ ಅನಿವಾರ್ಯವಾಗಿ ನಿವೃತ್ತಿಗೊಂಡ ಅವರು ವೀಕ್ಷಕ ವಿವರಣೆಕಾರರಾಗಿ, ವಿಶ್ಲೇಷಕರಾಗಿ ಆಟದ ಸೂಕ್ಷ್ಮಗಳ ಕುರಿತು ಮಾತನಾಡುತ್ತಲೇ ಇರುತ್ತಾರೆ. ಬದಲಾದ ಕ್ರಿಕೆಟ್‌ನ ಸ್ವರೂಪವನ್ನು ಮುಕ್ತವಾಗಿ ಸ್ವಾಗತಿಸುವ ಅವರು ಐಪಿಎಲ್ ಕುರಿತು 'ಸುಧಾ' ಜತೆ ಮಾತನಾಡಿದ್ದಾರೆ.**

ರೀತಿ ವಿಶ್ವಕಪ್‌ಗೆ 'ಡ್ರೆಸ್ ರಿಹರ್ಸಲ್' ಇದ್ದಂತೆ.

◆ **ವಿಶ್ವಕಪ್ ಆಯ್ಕೆಯ ವೇಳೆ ಐಪಿಎಲ್ ಪ್ರದರ್ಶನವನ್ನು ಪರಿಗಣಿಸುತ್ತಾರೆ ಎನಿಸುತ್ತದೆಯೇ?**

ವಿರಾಟ್ ಕೊಹ್ಲಿ ಅವರೇನೋ ವಿಶ್ವಕಪ್ ತಂಡದ ಆಯ್ಕೆಗೆ ಐಪಿಎಲ್ ಪ್ರದರ್ಶನ ಮಾನದಂಡವಾಗದು ಎಂದಿದ್ದಾರೆ. ಆದರೆ, ಆಯ್ಕೆಗೆ ಅರ್ಹತೆ ಇರುವ ಸೂಚನೆಯನ್ನು ದೊಡ್ಡದಾಗಿ ಕೊಡುವ ರಿಷಭ್ ಪಂತ್ ತರಹದ ಕೆಲವು ಆಟಗಾರರಿರುತ್ತಾರೆ. ಇಂಗ್ಲಿಷ್‌ನಲ್ಲಿ ಇಂಥವರನ್ನು 'ಫ್ರಿಂಜ್ ಪ್ಲೇಯರ್ಸ್' ಎನ್ನುತ್ತೇವೆ. ಆರೇಳು ದೊಡ್ಡ ಸ್ಕೋರ್ ಹೊಡೆದರೆ ಅಥವಾ ಅಷ್ಟೇ ಪಂದ್ಯಗಳಲ್ಲಿ ಅದ್ಭುತವಾದ ಬೌಲಿಂಗ್ ಪ್ರದರ್ಶನ ನೀಡಿದರೆ ಒಂದಿಬ್ಬರನ್ನು ಆಯ್ಕೆಗೆ ಪರಿಗಣಿಸುವ ಸಾಧ್ಯತೆ ಇದ್ದೇ ಇರುತ್ತದೆ. ಶಮಿ, ಬೂಮ್ರಾ ತರಹದ ಬೌಲರ್‌ಗಳನ್ನೂ ಈ ವಿಷಯದಲ್ಲಿ ಗಮನಿಸಬಹುದು.

◆ **ಕಳೆದ ವಿಶ್ವಕಪ್‌ಗೆ ಐಪಿಎಲ್ ಪ್ರದರ್ಶನದಿಂದಾಗಿ ಯಾರಾದರೂ ಆಯ್ಕೆಯಾದರು ಎನಿಸುತ್ತದೆಯೇ?**

ಹೋದ ಸಲ ಐಪಿಎಲ್ ಹಾಗೂ ವಿಶ್ವಕಪ್ ಟೂರ್ನಿಗಳ ನಡುವೆ ದೊಡ್ಡ ಅಂತರವಿತ್ತು. ಹೀಗಾಗಿ ಆ ಪ್ರಶ್ನೆಯೇ ಬರುವುದಿಲ್ಲ. ಆದರೂ ಅಜಿಂಕ್ಯ ರಹಾನೆ ಅವರಂಥ ಆಟಗಾರರು ಐಪಿಎಲ್ ಮೂಲಕವೂ ಛಾಪು ಮೂಡಿಸಿರುವ ಉದಾಹರಣೆ ನಮ್ಮೆದುರಲ್ಲಿ ಇದೆ.

◆ **ಕ್ರಿಕೆಟ್ 'ಕಾಪಿ ಬುಕ್' ಹೊಡೆತಗಳ ಆರಾಧಕರಿಗೆ ಐಪಿಎಲ್ ಬ್ಯಾಟಿಂಗ್ ಶೈಲಿ ನೋಡಿ ಅಚ್ಚರಿಯಾಗಬಹುದು. ಕೆಲವರು ಈ ಹೊಡೆತಗಳನ್ನು 'ಕೊಳ್ಳೆ ಆಟ' ಎಂದು ಟೀಕಿಸುವುದೂ ಉಂಟು. ನಿಮಗೇನನ್ನಿಸುತ್ತದೆ?**

ಟ್ವೆಂಟಿ–20 ನಿಯಮಗಳು ಬ್ಯಾಟ್ಸ್‌ಮನ್‌ಗೆ ಹೆಚ್ಚು ಪೂರಕವಾಗಿವೆ. ಹೀಗಾಗಿ ಬೌಲರ್‌ಗಳು ಹೊಡೆತ ತಿನ್ನುವುದು ಸಾಮಾನ್ಯ. ಆದರೆ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರುದ್ಧ ಮುಂಬೈ ಇಂಡಿಯನ್ಸ್‌ನ ಜಸ್‌ಪ್ರೀತ್ ಬೂಮ್ರಾ ಮಾರ್ಚ್ 28ರಂದು ಬೌಲಿಂಗ್ ಮೂಲಕವೇ ಪಂದ್ಯ ಗೆಲ್ಲಿಸಿಕೊಟ್ಟರು. ರಿಷಭ್ ಪಂತ್, ಸರ್ಫರಾಜ್, ಎಬಿ ಡಿವಿಲಿಯರ್ಸ್ ತರಹದ ಆಟಗಾರರು ಬ್ಯಾಟಿಂಗ್ ಮಾಡುವ ರೀತಿಯನ್ನು ನೋಡಿದರೆ ನಿದ್ರೆಯಲ್ಲೂ ಅವರ ಶೈಲಿ ಕಾಡುತ್ತದೆ. ಕ್ರಿಕೆಟ್‌ನಲ್ಲಿ ಕಾಪಿ ಬುಕ್ ಶಾಟ್ಸ್‌ಗೆ ಮರ್ಯಾದೆ ಇದೆ. ಹಾಗೆಯೇ 'ಇಂಪ್ರುವೈಸ್ಡ್' ಹೊಡೆತಗಳಿಗೂ ಅವಕಾಶ. ನಾನು ಎರಡನ್ನೂ ಆಸ್ವಾದಿಸುತ್ತೇನೆ. ಟೆಸ್ಟ್ ಪಂದ್ಯಗಳು, ಏಕದಿನದ ಪಂದ್ಯಗಳ ಮೇಲೂ ಇಂಥ ಶೈಲಿಯ ಬ್ಯಾಟಿಂಗ್ ಪರಿಣಾಮ ಬೀರಿದೆ. ಟೆಸ್ಟ್ ಪಂದ್ಯಗಳಲ್ಲಿ ಫಲಿತಾಂಶ ಬರಲು ಶುರುವಾಗಿರುವುದೇ ಇದಕ್ಕೆ ಪುಷ್ಟಿ. ಕ್ರಿಕೆಟ್ಟನ್ನು 'ಕ್ಲಾಸಿಕಲ್' ಆಗಿ ನೋಡುವವರೂ ಇದ್ದಾರೆ. ಅವರಿಗೂ 'ಇಂಪ್ರುವೈಸ್ಡ್' ಹೊಡೆತಗಳು ಕ್ರಮೇಣ ರುಚಿಸುತ್ತಾ ಹೋಗುತ್ತವೆ. ಎರಡರ ಮಿಶ್ರಣ ನೋಡೋಕೆ ಮಜಾ ಕೊಡುತ್ತದೆ. ನಾನಂತೂ ಈ ವಿಷಯದಲ್ಲಿ ತುಂಬಾ ಉದಾರಿ.

◆ **ನೀವು ಆಡುತ್ತಿದ್ದ ಕಾಲದಲ್ಲಿ ಇಂಥ 'ಇಂಪ್ರುವೈಸೇಷನ್' ಅನ್ನು ಪ್ರೋತ್ಸಾಹಿಸುತ್ತಿದ್ದರಾ?**

ಖಂಡಿತ ಪ್ರೋತ್ಸಾಹಿಸುತ್ತಿದ್ದರು. ನಾನು ಕ್ರಿಕೆಟ್ ಆಡುವುದನ್ನು ನಿಲ್ಲಿಸಿದ್ದು 2006ರಲ್ಲಿ. ಐಪಿಎಲ್ ಶುರುವಾದದ್ದು 2007ರಲ್ಲಿ. ಒಂದು ವೇಳೆ ನಾನು ಐಪಿಎಲ್‌ನಲ್ಲಿ ಆಡಿದ್ದಿದ್ದರೆ ಒಳ್ಳೆಯ ಅವಕಾಶ ಸಿಕ್ಕಿರುತ್ತಿತ್ತು. ಯಾಕೆಂದರೆ, ನಾನು ಆಲ್‌ರೌಂಡರ್ ಆಗಿದ್ದೆ. ಚುಟುಕು ಕ್ರಿಕೆಟ್‌ನಲ್ಲಿ ನಮ್ಮಂಥವರಿಗೆ ಬೇಡಿಕೆ ಜಾಸ್ತಿ. ಐಪಿಎಲ್ ಆಡಲು ಸಾಧ್ಯವಾಗಲಿಲ್ಲವಲ್ಲ ಎಂದು ನಾನು ಅನೇಕ ಸಲ ಪೇಚಾಡಿಕೊಂಡಿದ್ದೂ ಇದೆ. ಅದನ್ನು ಈಗ ನೋಡಿ ಆಸ್ವಾದಿಸುತ್ತಿದ್ದೇನೆ.

◆ **ದೇಸಿ ಕ್ರಿಕೆಟ್‌ನಲ್ಲಿ, ಅದರಲ್ಲೂ ರಣಜಿ ಕ್ರಿಕೆಟ್‌ನಲ್ಲಿ ಐಪಿಎಲ್‌ನ ವ್ಯತಿರಿಕ್ತ ಪರಿಣಾಮ ಏನಾದರೂ ಕಂಡಿದೆಯೇ?**

ಹೌದು. ನಿಯಮಿತ ಪಂದ್ಯಗಳ ಆಟದ ರೀತಿಯೇ ಬೇರೆ. ರಣಜಿ ಪಂದ್ಯಗಳು ಬಯಸುವ ಆಟವೇ ಬೇರೆ. ಎಷ್ಟೋ ಜನ ದೀರ್ಘ ಕಾಲ ನಿಂತು ಆಡುವ ಸಂಯಮ ಕಳೆದುಕೊಂಡಿದ್ದಾರೆ. 300 ರನ್ ಹೊಡೆಯಬೇಕು ಎಂದರೆ ವಿಪರೀತ ಸಂಯಮದಿಂದ ಆಡಬೇಕು. ಅಂಥ ಮನಸ್ಥಿತಿ ಈಗ ಹೋಗುತ್ತಿದೆ. ಸ್ವಲ್ಪ ಒತ್ತಡ ಬೀಳುತ್ತಿದೆ ಎಂದರೂ ನುಗ್ಗಿ ಹೊಡೆಯಲು ಹೋಗುತ್ತಾರೆ. ತಾಳ್ಮೆ ಕಳೆದುಕೊಂಡು ರಣಜಿ ಪಂದ್ಯ ಆಡಿದರೆ ಒಳ್ಳೆಯ ಫಲಿತಾಂಶ ಸಿಗುವುದಿಲ್ಲ ಎಂದು ಅನುಭವದಿಂದಲೇ ಬಲ್ಲೆ.

◆ **ಕ್ರಿಕೆಟ್ ದೈತ್ಯರಿಗೆ ವೆಸ್ಟ್‌ಇಂಡೀಸ್ ಹೆಸರುವಾಸಿ. ಐಪಿಎಲ್‌ನಲ್ಲೂ ರಸೆಲ್, ಕ್ರಿಸ್ ಗೇಲ್, ಡ್ವೇನ್ ಬ್ರಾವೋ, ಸುನೀಲ್ ನರೇನ್ ತರಹದ ಆಟಗಾರರು ಛಾಪು ಮೂಡಿಸಿದ್ದಾರೆ. ಇಲ್ಲಿ ವೈಯಕ್ತಿಕವಾಗಿ ಮಿಂಚುವ ಅವರು ತಮ್ಮ ದೇಶದ ಕ್ರಿಕೆಟ್‌ನಲ್ಲಿ ಯಾಕೆ ಹೊಳೆಯುತ್ತಿಲ್ಲ?**

ವೆಸ್ಟ್‌ಇಂಡೀಸ್ ಆಟರಾರರನ್ನು ನಾನು 'ದಾದಾ ಪ್ಲೇಯರ್ಸ್' ಎಂದೇ ಕರೆಯುತ್ತೇನೆ. ಐದು ದೇಶಗಳ ಆಟಗಾರರು ಆ ತಂಡದ ಪರವಾಗಿ ಅಲ್ಲಿ ಆಡುತ್ತಾರೆ. ಆಂತರಿಕ ಸಮಸ್ಯೆಯಿಂದ ತಂಡ ನಲುಗಿದಂತೆ ಕಾಣುತ್ತಿದೆಯಷ್ಟೆ. ಮುಂದಿನ ವಿಶ್ವಕಪ್‌ನಲ್ಲಿ ವಿಂಡೀಸರು ನನ್ನ ಪ್ರಕಾರ 'ಡಾರ್ಕ್ ಹಾರ್ಸ್'. ಅಚ್ಚರಿಯ ಫಲಿತಾಂಶ ನೀಡುವ ಎಲ್ಲಾ ಸಾಮರ್ಥ್ಯ ಅವರಿಗೆ ಇದೆ. ರಸೆಲ್, ಡ್ವೇನ್ ಬ್ರಾವೋ, ಡರೆನ್ ಬ್ರಾವೋ, ಗೇಲ್, ನರೇನ್ ಎಲ್ಲರೂ ವೈಯಕ್ತಿವಾಗಿ ದಾದಾಗಳು. ಸಾಂಘಿಕವಾಗಿ ಕ್ಲಿಕ್ ಆದರೆ ಫಲಿತಾಂಶವೇ ಬೇರೆಯಾಗುತ್ತದೆ. ಯಾವ ತಂಡಗಳೂ ಅವರನ್ನು ಉಪೇಕ್ಷಿಸುವ ಹಾಗಿಲ್ಲ. ಈಗಿನ ಐಪಿಎಲ್‌ನಲ್ಲೇ ನೋಡಿ; ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ನಡೆದ ಮೊದಲ ಪಂದ್ಯದಲ್ಲಿ ರಸೆಲ್ ಕೋಲ್ಕತ್ತ ನೈಟ್ ರೈಡರ್ಸ್‌ಗೆ ಗೆಲುವು ತಂದುಕೊಟ್ಟರು. ಬರೀ 19 ಎಸೆತಗಳಲ್ಲಿ 49 ಹೊಡೆದು ಔಟಾಗದೇ ಆಟ ಗೆಲ್ಲಿಸಿಕೊಂಡು ಬಂದರು. ವಿಂಡೀಸ್‌ನಲ್ಲಿ ಇಂಥ ದಾದಾ ಆಟಗಾರರು ಬೇಕಾದಷ್ಟು ಜನರಿದ್ದಾರೆ. ■